ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು

ಸಂಖ್ಯೆ: ಪಪೂಶಿಇ/ಶೈಶಾ-1/ಎನ್.ಎಸ್.ಕ್ಯೂ.ಎಫ್/2018-2019 ದಿನಾಂಕ-25.06.2018

## ಜ್ಞಾಪನ

ವಿಷಯ: 2018-2019ನೇ ಸಾಲಿನಲ್ಲಿ ಎನ್.ಎಸ್.ಕ್ಯೂ.ಎಫ್ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ಬಗ್ಗೆ ಮುಂದುವರೆದ ಮಾರ್ಗಸೂಚಿ -2

ಉಲ್ಲೇಖ:-1. ನಿರ್ದೇಶಕರು(ಕಾರ್ಯಕ್ರಮ) ಎಸ್.ಎಸ್.ಎ ಮತ್ತು ಆರ್.ಎಂ.ಎಸ್ ಎ ರಾ.ಮಾ.ಶಿ.ಅ ಇವರ ಜ್ಞಾಪನ ಪತ್ರ ಸಂಖ್ಯೆ:N.S.Q.F.07/18-19 ದಿನಾಂಕ:- 19.06.2018

2. ಈ ಕಛೇರಿಯ ಪತ್ರ ಸಂಖ್ಯೆ:ಪಿಯುಸಿ/ಶೈಶಾ-01/ಎನ್.ಎಸ್.ಕ್ಯೂ.ಎಫ್ /02/2018-2019 ದಿನಾಂಕ21.06.2018

---

2018-2019 ನೇ ಸಾಲಿನಲ್ಲಿ ಎನ್.ಎಸ್.ಕ್ಯೂ.ಎಫ್ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ಸಂಬಂಧ ಈ ಯೋಜನೆಯ 05 ಸೆಕ್ಟಾರ್‌ಗಳಿಗೆ ತರಬೇತುದಾರರನ್ನು ನೇಮಕ ಮಾಡಿರುವ ಬಗ್ಗೆ ಹಾಗೂ ತರಗತಿಗಳನ್ನು ನಡೆಸಲು ವೇಳಾಪಟ್ಟಿ ಸಿದ್ಧಪಡಿಸುವ ಬಗ್ಗೆ ಉಲ್ಲೇಖಿತ ಪತ್ರದಲ್ಲಿ ತಿಳಿಸಲಾಗಿತ್ತು.

ಈ ಸಂಬಂಧ ಕರ್ತವ್ಯದ ಮೇಲೆ ಹಾಜರಾಗುವ ತರಬೇತುದಾರರು ಈ ಪತ್ರದೊಂದಿಗೆ ಲಗತ್ತಿಸಿರುವ ಅನುಬಂಧ-1 ರಲ್ಲಿ ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು ಪೂರ್ಣಗೊಳಿಸಿರುವ ಬಗ್ಗೆ ಸಂಬಂಧಿಸಿದ ಕಾಲೇಜುಗಳ ಪ್ರಾಂಶುಪಾಲರು ಖಾತ್ರಿಪಡಿಸಿಕೊಳ್ಳುವುದು.

ಹೆಚ್ಚಿನ ಮಾಹಿತಿಗಾಗಿ ಅಡಕದಲ್ಲಿರುವ ಉಲ್ಲೇಖ 01 ರ ಪತ್ರವನ್ನು ಅವಗಾಹಿಸಲು ತಿಳಿಸಿದೆ.

ಜಂಟಿ ನಿರ್ದೇಶಕರು(ಶೈಕ್ಷಣಿಕ)
ಪದವಿ ಪೂರ್ವ ಶಿಕ್ಷಣ ಇಲಾಖೆ

ಇವರಿಗೆ,

1. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, -ಜಿಲ್ಲೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಎನ್‌ಎಸ್‌ಕ್ಯೂಎಫ್ ಕಾಲೇಜುಗಳ ಪ್ರಾಂಶುಪಾಲರಿಗೆ ನಿರ್ದೇಶನ ನೀಡಲು ಸೂಚಿಸಿದೆ.
2. ನಿರ್ದೇಶಕರ ಆಪ್ತಶಾಖೆ.
3. ಇ-ಆಡಳಿತ-ಅಂತರ್‌ಜಾಲದಲ್ಲಿ ಅಳವಡಿಸಲು.
4. ಕಛೇರಿ ಪ್ರತಿ

ಸಂಖ್ಯೆ:.ಎನ್.ಎಸ್.ಕ್ಯೂ.ಎಫ್.07/2018-19 ದಿನಾಂಕ:02-06-2018 ಕ್ಕೆ ಅನುಬಂಧ-1

| Sl. No | Qualification |
|---|---|
| 1. | **IT/ITeS:**<br>Bachelors Degree in Computer Engineering/ Computer Application/ Information Technology Or M.Tech.in Computer Engineering/ Computer Science & Engineering/ Software Engineering Computer Applications/ Information Technology Or Masters Degree in Computer Application Or Associate Member of Institution of Engineers (India) by examination in Computer Engineering after passing 3 years Diploma in Computer Engineering/ Computer Applications/ Information Technology Or DOEACC B Level Certificate.<br>Minimum 2 years relevant experience for Graduate candidates and 1 year for Post Graduate candidates in the field of Teaching/ System Management/ System Administration/ Network Administration/ Research and Quality Control. |
| 2. | **Automobile:**<br>B.Tech.in Automobile/Mechanical Engineering or Graduate with 3 year Diploma in Automobile Engineering from State Board of Technical Education Minimum 2 years of relevant experience in the field of Automobile workshops/Authorized dealers/Teaching in relevant field. |
| 3. | **Health Care:**<br>B.Sc. Nursing & Midwifery (4 years) or 3 ½ years Diploma in GNM with one year experience. |
| 4. | **Beauty & Wellness:**<br>Diploma in Cosmetology/ Beauty Therapy/ Beauty Culture from a recognized Institution. Minimum 1 year working experience in the profession. |
| 5. | **Retail:**<br>MBA in Sales and Marketing Or Post Graduate in Retail Management Or Graduate in any discipline with Diploma or Certificate course in Retail/ Retail Management/ Marketing & Sales Minimum 2 years relevant experience for Graduate candidates and 1 year for Post Graduate candidates in the field of Marketing/Sales/Sales & Operation/Sales & Services/Teaching. |

**ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ- ಕರ್ನಾಟಕ**
ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ
ಕಟ್ಟಡಗಳ ಪೂರಕ ಕಟ್ಟಡ, ನೃಪತುಂಗ ರಸ್ತೆ,
ಬೆಂಗಳೂರು-560 001.

Skill India

ಸಂಖ್ಯೆ: NSQF.07/2018-19 ದಿನಾಂಕ:19-06-2018

**ಜ್ಞಾಪನ**

ವಿಷಯ: 2018-19ನೇ ಸಾಲಿನಲ್ಲಿ ಎನ್.ಎಸ್.ಕ್ಯೂ.ಎಫ್ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ಬಗ್ಗೆ ಮುಂದುವರೆದ ಮಾರ್ಗಸೂಚಿ-2.

ಉಲ್ಲೇಖ: ಈ ಕಛೇರಿಯ ಪತ್ರದ ಸಮ ಸಂಖ್ಯೆಯ ದಿನಾಂಕ:02-06-2018

ಎನ್.ಎಸ್.ಕ್ಯೂ.ಎಫ್ ಯೋಜನೆಯನ್ನು 2018-19ನೇ ಸಾಲಿನಲ್ಲಿ ಸಮರ್ಪಕವಾಗಿ ಅನುಷ್ಠಾನ ಮಾಡುವ ಸಂಬಂಧ ಉಲ್ಲೇಖಿತ ಪತ್ರದಲ್ಲಿ ಎನ್.ಎಸ್.ಕ್ಯೂ.ಎಫ್ ಯೋಜನೆಯ ಎಲ್ಲಾ 05 ಸೆಕ್ಟಾರ್‌ಗಳಿಗೆ ತರಬೇತುದಾರರನ್ನು ನೇಮಕ ಮಾಡಿರುವ ಬಗ್ಗೆ ಹಾಗೂ ಈ ಯೋಜನೆಯ ಅನುಷ್ಠಾನಗೊಳಿಸಲು ತರಗತಿಗಳನ್ನು ನಡೆಸುವ ವೇಳಾಪಟ್ಟಿಯನ್ನು ಸಿದ್ಧಪಡಿಸುವ ಬಗ್ಗೆ ತಿಳಿಸಲಾಗಿತ್ತು.

## I. ವಿದ್ಯಾರ್ಥಿಗಳ ದಾಖಲಾತಿ:

ಉಲ್ಲೇಖಿತ ಪತ್ರದಲ್ಲಿ 2018-19ನೇ ಸಾಲಿನಲ್ಲಿ ಎನ್.ಎಸ್.ಕ್ಯೂ.ಎಫ್ ಅನುಷ್ಠಾನ ಮಾಡುತ್ತಿರುವ ಶಾಲಾ / ಕಾಲೇಜುಗಳಲ್ಲಿ 09ನೇ ತರಗತಿಯಿಂದ 12ನೇ ತರಗತಿಯವರಗೆ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳುವ ಬಗ್ಗೆ ತಿಳಿಸಲಾಗಿದ್ದರೂ ಸಹ ಇನ್ನು ಹಲವಾರು ಶಾಲೆಗಳಲ್ಲಿ 09 ಮತ್ತು 11ನೇ ತರಗತಿಯ ವಿದ್ಯಾರ್ಥಿಗಳ ಪ್ರಾಯೋಗಿಕ ಪರೀಕ್ಷೆಯ ಫಲಿತಾಂಶವು ಬರದೆ ಇರುವುದರಿಂದ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ತೊಂದರೆಯಾಗುತ್ತಿರುವ ಬಗ್ಗೆ ದೂರುಗಳು ಬರುತ್ತಿರುವ ಹಿನ್ನಲೆಯಲ್ಲಿ 09 ರಿಂದ 12ನೇ ತರಗತಿಯವರೆಗೆ ವಿದ್ಯಾರ್ಥಿಗಳನ್ನು ಈ ಕೆಳಕಂಡ ಸೂಚನೆಗಳಂತೆ ದಾಖಲಾತಿ ಮಾಡಿಕೊಳ್ಳಲು ಎಲ್ಲಾ ಶಾಲಾ / ಕಾಲೇಜುಗಳ ಮುಖ್ಯಸ್ಥರಿಗೆ ಅನುಮತಿ ನೀಡಿದೆ.

a. 2018-19ನೇ ಸಾಲಿನಲ್ಲಿ 09ನೇ ತರಗತಿಗೆ ಪ್ರತಿ ಸೆಕ್ಟಾರ್‌ಗೆ ಗರಿಷ್ಠ 25 ವಿದ್ಯಾರ್ಥಿಗಳವರಗೆ ಕಡ್ಡಾಯವಾಗಿ ದಾಖಲಾತಿ ಮಾಡಿಕೊಳ್ಳುವುದು ಹಾಗೂ ಪ್ರತಿ ಹಂತದಲ್ಲೂ ಗರಿಷ್ಠ 25 ವಿದ್ಯಾರ್ಥಿಗಳ ದಾಖಲಾತಿ ಮೀರದಂತೆ ಎಚ್ಚರಿಕೆ ವಹಿಸುವುದು.

b. 2017-18ನೇ ಸಾಲಿನಲ್ಲಿ 09 ಮತ್ತು 11ನೇ ತರಗತಿಯಲ್ಲಿ ವ್ಯಾಸಂಗ ಮಾಡಿ ತಾತ್ವಿಕ ಪರೀಕ್ಷೆಯಲ್ಲಿ ಉತ್ತೀರ್ಣಗೊಂಡು, ಪ್ರಾಯೋಗಿಕ ಪರೀಕ್ಷೆಯಲ್ಲಿ ಅನುತೀರ್ಣಗೊಂಡಿರುವ ವಿದ್ಯಾರ್ಥಿಗಳನ್ನು ಮುಂದಿನ ಶೈಕ್ಷಣಿಕ ವರ್ಷದ ವಾರ್ಷಿಕ ಪ್ರಾಯೋಗಿಕ ಪರೀಕ್ಷೆಯಲ್ಲಿ

ಕಡ್ಡಾಯವಾಗಿ ಉತ್ತೀರ್ಣರಾಗುವ ಷರತ್ತಿನ ಮೇರೆಗೆ ಕ್ರಮವಾಗಿ 10 ಮತ್ತು 12ನೇ ತರಗತಿಗೆ ದಾಖಲಾತಿ ಮಾಡಿಕೊಳ್ಳುವುದು.

c. 2017-18ನೇ ಸಾಲಿನಲ್ಲಿ 09 ಮತ್ತು 11ನೇ ತರಗತಿಯಲ್ಲಿ ವ್ಯಾಸಂಗ ಮಾಡಿ ತಾತ್ವಿಕ ಪರೀಕ್ಷೆಯಲ್ಲಿ ಉತ್ತೀರ್ಣಗೊಂಡು, ಪ್ರಾಯೋಗಿಕ ಪರೀಕ್ಷೆಯ ಫಲಿತಾಂಶ ಇನ್ನು ಬಾರದೆ ಇರುವ ವಿದ್ಯಾರ್ಥಿಗಳನ್ನು ಸಹ ಕ್ರಮವಾಗಿ 10 ಮತ್ತು 12ನೇ ತರಗತಿಗೆ ದಾಖಲಾತಿ ಮಾಡಿಕೊಳ್ಳುವುದು. ಒಂದು ವೇಳೆ ಫಲಿತಾಂಶ ಬಂದ ನಂತರ ಸದರಿ ವಿದ್ಯಾರ್ಥಿಗಳು ಪ್ರಾಯೋಗಿಕ ಪರೀಕ್ಷೆಯಲ್ಲಿ ಅನುತೀರ್ಣರಾಗಿದ್ದಲ್ಲಿ ಮೇಲೆ ಕಂಡಿಕೆ (b) ರಂತೆ ಕ್ರಮವಹಿಸತಕ್ಕದ್ದು.

d. ಈ ಹಿಂದೆ ಎನ್.ಎಸ್.ಕ್ಯೂ.ಎಫ್ ಯೋಜನೆಯಡಿ 09 ಮತ್ತು 10ನೇ ತರಗತಿಯಲ್ಲಿ ವ್ಯಾಸಂಗ ಮಾಡಿರುವ ವಿದ್ಯಾರ್ಥಿಗಳನ್ನು ಮಾತ್ರ 11ನೇ ತರಗತಿ ದಾಖಲಾತಿ ಮಾಡಿಕೊಳ್ಳುವಂತೆ ತಿಳಿಸಲಾಗಿತ್ತು ಆದರೆ ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಜಾರಿಯಾಗಿರುವ ಸಮಗ್ರ ಶಿಕ್ಷಣ ಅಭಿಯಾನದಡಿಯಲ್ಲಿ ಕೇಂದ್ರ ಸರ್ಕಾರವು 11ನೇ ತರಗತಿಗೂ ಸಹ ಹೊಸ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳಲು ಅನುವು ಮಾಡಿಕೊಟ್ಟಿದ್ದು, ಅದರಂತೆ 09 ಮತ್ತು 10ನೇ ತರಗತಿಯಲ್ಲಿ ಎನ್.ಎಸ್.ಕ್ಯೂ.ಎಫ್ ವಿಷಯವನ್ನು ವ್ಯಾಸಂಗ ಮಾಡದೆ ಇರುವ ವಿದ್ಯಾರ್ಥಿಗಳನ್ನು 11ನೇ ತರಗತಿಗೆ ಗರಿಷ್ಠ 25 ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ಅನುಮತಿಸಿದೆ.

e. 11ನೇ ತರಗತಿಯಲ್ಲಿ ಹೊಸದಾಗಿ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳುವ ಮುನ್ನ 09 ಮತ್ತು 10ನೇ ತರಗತಿಯಲ್ಲಿ ಎನ್.ಎಸ್.ಕ್ಯೂ.ಎಫ್ ವಿಷಯವನ್ನು ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳಿಗೆ ಮೊದಲ ಆದ್ಯತೆಯನ್ನು ನೀಡುವುದು. ಉಳಿದಂತೆ ಮೇಲೆ ಕಂಡಿಕೆ (d) ರಂತೆ ಹೊಸ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳುವುದು.

## II. ತರಬೇತುದಾರರ ನಿಯೋಜನೆ:

ಎಲ್ಲಾ 05 ಸೆಕ್ಟಾರ್‌ಗಳಲ್ಲಿ ತರಬೇತುದಾರರನ್ನು ನಿಯೋಜನೆ ಮಾಡಿರುವ ಬಗ್ಗೆ ಉಲ್ಲೇಖಿತ ಪತ್ರದಲ್ಲಿ ತಿಳಿಸಲಾಗಿತ್ತು. ಆದರೂ ಸಹ ಹಲವಾರು ಶಾಲೆಗಳಲ್ಲಿ ಸಂಬಂಧಿಸಿದ ಸಂಸ್ಥೆಗಳ ವತಿಯಿಂದ ಹಾಜರಾಗುವ ತರಬೇತುದಾರರನ್ನು ಕರ್ತವ್ಯಕ್ಕೆ ಹಾಜರುಪಡಿಸಿಕೊಳ್ಳದೆ ಇರುವುದು ರಾಜ್ಯ ಕಛೇರಿಯ ಗಮನಕ್ಕೆ ಬಂದಿರುತ್ತದೆ. ಮುಂದುವರೆದಂತೆ ಹೆಲ್ತ್‌ಕೇರ್ ಸೆಕ್ಟಾರ್‌ಗೆ ಸಂಬಂಧಿಸಿದಂತೆ ಹಾಲಿ ಕಾರ್ಯನಿರ್ವಹಿಸುತ್ತಿರುವ ತರಬೇತುದಾರರನ್ನು ಮುಂದಿನ ಆದೇಶದವರೆವಿಗೂ ಮುಂದುವರೆಸಲು ಉಲ್ಲೇಖಿತ ಪತ್ರದಲ್ಲಿ ತಿಳಿಸಲಾಗಿದ್ದರೂ ಸಹ ಹಲವಾರು ಶಾಲೆಗಳ ಮುಖ್ಯ ಶಿಕ್ಷಕರು ಇನ್ನು ತರಬೇತುದಾರರನ್ನು ಕರ್ತವ್ಯಕ್ಕೆ ಹಾಜರುಪಡಿಸಿಕೊಳ್ಳದೆ ಇರುವುದು ಸಹ ಗಮನಿಸಲಾಗಿದೆ. ಇದರಿಂದ

ಯೋಜನೆಯ ಸಮರ್ಪಕ ಅನುಷ್ಠಾನಕ್ಕೆ ಅನಗತ್ಯ ತೊಂದರೆಯಾಗುತ್ತಿರುವುದಲ್ಲದೆ ಎನ್.ಎಸ್.ಕ್ಯೂ.ಎಫ್ ವಿಷಯವನ್ನು ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳು ಮಾನಸಿಕ ಒತ್ತಡಕ್ಕೆ ಸಿಲುಕುವಂತಾಗಿದೆ. ಹಾಗಾಗಿ ಇನ್ನು ಮುಂದೆ ಯಾವುದೇ ಕಾರಣ ನೀಡದೆ ಎಲ್ಲಾ ಶಾಲೆಗಳಲ್ಲಿ ಎಲ್ಲಾ ಸೆಕ್ಟಾರ್‌ಗಳಿಗೂ ತರಬೇತುದಾರರನ್ನು ಉಲ್ಲೇಖಿತ ಜ್ಞಾಪನದಲ್ಲಿ ತಿಳಿಸಿದಂತೆ ಹಾಜರುಪಡಿಸಿಕೊಂಡು ಯೋಜನೆಯನ್ನು ಸಮರ್ಪಕವಾಗಿ ಹಾಗೂ ಯಶಸ್ವಿಯಾಗಿ ನಡೆಸಲು ಎಲ್ಲಾ ಶಾಲಾ / ಕಾಲೇಜುಗಳ ಮುಖ್ಯಸ್ಥರಿಗೆ ಕಟ್ಟುನಿಟ್ಟಾಗಿ ಸೂಚಿಸಿದೆ.

ನಿರ್ದೇಶಕರು (ಕಾರ್ಯಕ್ರಮ)
ಎಸ್.ಎಸ್.ಎ ಮತ್ತು ಆರ್.ಎಂ.ಎಸ್.ಎ
ಬೆಂಗಳೂರು

ಪ್ರತಿಯನ್ನು:

1. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಸಲ್ಲಿಸುತ್ತಾ ಎನ್.ಎಸ್.ಕ್ಯೂ.ಎಫ್ ಅನುಷ್ಠಾನಿತ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಿಗೆ ಅಗತ್ಯ ಸೂಚನೆ ನೀಡಲು ಕೋರಿದೆ.
2. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ,
3. ರಾಜ್ಯದ ಎಲ್ಲಾ ಜಿಲ್ಲಾ ಯೋಜನಾ ಉಪಸಮನ್ವಯಾಧಿಕಾರಿಗಳು, ಆರ್.ಎಂ.ಎಸ್.ಎ ಇವರಿಗೆ ಸಲ್ಲಿಸುತ್ತಾ ನಿಮ್ಮ ಜಿಲ್ಲಾ ವ್ಯಾಪ್ತಿಯ ಶಾಲೆಗಳಿಗೆ ಅಗತ್ಯ ಸೂಚನೆ ನೀಡಲು ಸೂಚಿಸಿದೆ.
4. ವೃತ್ತಿ ಕೌಶಲ್ಯ ಅನುಷ್ಠಾನ ಮಾಡುತ್ತಿರುವ 100 ಶಾಲೆ / ಕಾಲೇಜುಗಳ ಉಪಪ್ರಾಂಶುಪಾಲರು ಹಾಗೂ ಪ್ರಾಂಶುಪಾಲರಿಗೆ ಸಲ್ಲಿಸುತ್ತಾ ಮೇಲ್ಕಂಡ ಆದೇಶದಂತೆ ಅಗತ್ಯ ಕ್ರಮವಹಿಸಲು ಸೂಚಿಸಿದೆ.
5. ಎಲ್ಲಾ ಸೆಕ್ಟಾರ್‌ಗಳ ವೃತ್ತಿ ಕೌಶಲ್ಯ ಸಂಯೋಜಕರಿಗೆ (Vocational coordinators) ಅನುಪಾಲನೆಗೆ.
6. M/s Quess Corp Limited, 3/3/2, Bellandur Gate, Sarjapur Road, Bengaluru – 560103 ಇವರಿಗೆ
7. M/s Don Bosco Tech, BREADS, 75 North Road, Bengaluru – 560 084 ಇವರಿಗೆ
8. M/s LAQSH job Skills academy pvt ltd, Bangalore ಇವರಿಗೆ.